

## ಜಿಂದಾಲ್‌ನ ಮಹಾಪಾತ್ರೆ

ಬಳ್ಳಾರಿ ಜಿಲ್ಲೆಯ ತೋರಣಗಲ್ ಜಿಂದಾಲ್ ಸ್ಟೀಲ್ ಕಾರ್ಖಾನೆಯ ಎದುರಿಗೆ ಮುಖ್ಯರಸ್ತೆಯ ಬದಿಗೆ 160 ಟನ್ ಭಾರದ ಭವ್ಯ ಸ್ಟೀಲ್ ಪಾತ್ರೆಯನ್ನು ಕಾರ್ಖಾನೆಯ ಪರವಾಗಿ ನಿಲ್ಲಿಸಲಾಗಿದೆ. ಈ ಪಾತ್ರೆಯು 35 ಅಡಿ ಎತ್ತರ ಮತ್ತು 30 ಅಡಿ ಅಗಲವಾಗಿದೆ. ಪಾತ್ರೆಯ ಒಳಗಡೆ ಮಕ್ಕಳು ನಿಂತು, ಹಾಡಿ ಕುಣಿದು ಸಂಭ್ರಮಿಸುತ್ತಾರೆ. ಪಾತ್ರೆಯ ಬದಿಗೆ ಒಂದು ಫಲಕ ಕೂಡ ನೆಟ್ಟಿದ್ದಾರೆ. ಆ ಬರಹ ಹೀಗಿದೆ...

ಸಾಮಾನ್ಯವಾಗಿ ಅರ್ಥೈಸುವಾಗ 'ಪಾತ್ರೆ' ಎಂದರೆ ಒಂದು ಸಂಗ್ರಾಹಕ, ಬಿಂದಿಗೆ, ತಂಬಿಗೆ ಅಥವಾ ಲೋಟ ಎಂದು ಪರಿಗಣಿಸುತ್ತೇವೆ. ಇದನ್ನೇ ಒಂದು ಸಂಕೇತ ಅಥವಾ ಗುಣ ಎಂದು ಪರಿಗಣಿಸಲಾಗುತ್ತದೆ. ಇಂತಹ ಪಾತ್ರೆಯನ್ನು ತುಕ್ಕು ಹಿಡಿಯದ ಉಕ್ಕು (ಸ್ಟೇನ್ಲೆಸ್ ಸ್ಟೀಲ್) ಹಾಗೂ ಮಣ್ಣು ಬಳಸಿ ನಿರ್ಮಿಸುತ್ತಾರೆ. ಉಕ್ಕು ಎನ್ನುವ ಪದಾರ್ಥವು ವಿಜ್ಞಾನದ ಪ್ರತೀಕವಾದರೆ, ಮಣ್ಣು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ. ಇವು ಭಾರತೀಯರ ದೈನಂದಿನ ಸರಳ ವಸ್ತುಗಳಾಗಿ ಬದುಕಿನಲ್ಲಿ ಅರ್ಥಪೂರ್ಣ ಪಾತ್ರ ವಹಿಸುತ್ತವೆ. ಆಧ್ಯಾತ್ಮಿಕ ಮತ್ತು ಭವಿಷ್ಯದ ನಿರ್ಮಾಣದಲ್ಲೂ ಶುಭ ಸೂಚಕವಾದ ನಿರ್ಣಾಯಕ ಪಾತ್ರ ವಹಿಸುತ್ತವೆ.

–ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ್



## ಡಮರುಗವಲ್ಲ, ಇದು ಕಾಣಿಕೆ ಡಬ್ಬಿ

ಡಮರುಗದ ಆಕೃತಿಯನ್ನು ಹೋಲುವ ಈ ಕಲಾತ್ಮಕ 'ಕಾಣಿಕೆ ಡಬ್ಬಿ' ಉಡುಪಿ ಜಿಲ್ಲೆಯ ಹಿರಿಯಡಕದ ವೀರಭದ್ರಸ್ವಾಮಿ ದೇವಳದ ಮುಂಭಾಗದಲ್ಲಿದೆ. ಸಂಪೂರ್ಣ ಸ್ಟೇನ್‌ಲೆಸ್ ಸ್ಟೀಲ್ ಲೋಹದಿಂದ ನಿರ್ಮಿಸಲ್ಪಟ್ಟಿದೆ. ಮೇಲ್ಭಾಗದಲ್ಲಿ ಕಾಣಿಕೆ ಹಣವನ್ನು ಹಾಕಲು ರಂಧ್ರ ಅಳವಡಿಸಲಾಗಿದ್ದು, ಅದರ ಮೇಲೆ ಚಾವಣಿಯನ್ನೂ ಹೊಂದಿಸಲಾಗಿದೆ.

ಸುಮಾರು ನಾಲ್ಕಡಿ ಉದ್ದ ಒಂದೂವರೆ ಅಡಿ ಅಗಲದ ಈ ಕಾಣಿಕೆ ಡಬ್ಬಿಯ ಕೆಳ ಡಮರುವಿನ ಕೆಳಭಾಗದಲ್ಲಿ ಬೀಗ ಹಾಕಲಾಗಿದೆ. ಸಂಗ್ರಹಿಸಿದ ಕಾಣಿಕೆಯ ಹಣವನ್ನು ಟಪಾಲು ಪೆಟ್ಟಿಗೆಯಂತೆ ಅಲ್ಲಿಂದ ಹೊರ ತೆಗೆಯಲಾಗುತ್ತದೆ! ಕಾಣಿಕೆ ಹಾಕಲು ಭಕ್ತಾದಿಗಳನ್ನು ಈ ಲೋಹದ ಬೃಹತ್ ಡಮರುಗ ಆಕರ್ಷಿಸಿ ನೆನಪಿಸುವಂತಿದೆ!

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ

